# ಸ್ವರ್ಗದ ಒಡವೆಯಿದು ಹೂ ಕಣಿವೆ

**ದೈತ್ಯ ಪರ್ವತಗಳ ನಡುವಲ್ಲಿ, ಸ್ವರ್ಗದ ಹಾದಿಯಂತೆ ಕಾಣುವ ಕಣಿವೆಯಲ್ಲೀಗ ಪುಷ್ಪವಿಲಾಸ. ನೂರಾರು ಬಗೆಯ ಹೂಗಳನ್ನು ಧರಿಸಿರುವ ಕಣಿವೆಯಲ್ಲಿ ನವಚೈತನ್ಯ.**

■ ಗುರುರಾಜ ಎಸ್. ದಾವಣಗೆರೆ



ದೂರ ಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು
ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು
ತಂಗಾಳಿ ಜೋಗುಳವ ಹಾಡಲು ಬೇಕು

'ಬಂಗಾರದ ಹೂವು' ಸಿನಿಮಾದ ಜನಪ್ರಿಯ ಗೀತೆಯ ಈ ಸಾಲುಗಳು ಎಲ್ಲರೆದೆಯ ಹೊಂಗನಸುಗಳೂ ಹೌದಲ್ಲವೆ? ಆದರೆ, ದೂರ ಬೆಟ್ಟದಲ್ಲಿ ಮನೆಯನ್ನು ಹೊಂದುವುದು ಎಷ್ಟು ಜನರಿಗೆ ಸಾಧ್ಯ? ಆದರೆ, ಬೆಟ್ಟದಲ್ಲಿ ಬೆಟ್ಟ–ಬಯಲಲ್ಲಿ ಹೂವ ರಾಶಿಯ ದರ್ಶನ ಹಾಗೂ ತಂಗಾಳಿ ಜೋಗುಳದ ಅನುಭವ ನಮ್ಮದಾಗಿಸಿಕೊಳ್ಳುವುದು ಅಸಾಧ್ಯವೇನಲ್ಲ. ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಗೆ ಬಂದರೆ ಹೂ ಕಣಿವೆಯಲ್ಲಿ ಅಡ್ಡಾಡುತ್ತ, ತಂಗಾಳಿಯೊಂದಿಗೆ ಪಿಸುನುಡಿಯಬಹುದು.

ಉತ್ತರಾಖಂಡ ಎಂದಾಕ್ಷಣ ಅನೇಕರಿಗೆ 2013ರಲ್ಲಿ ಮೇಘಸ್ಫೋಟದಿಂದ ಜರುಗಿದ ಪ್ರಕೃತಿ ವಿಕೋಪ ಕಣ್ಣೆದುರು ಸುಳಿಯುತ್ತದೆ. ಈಗಲೂ ಉತ್ತರಾಖಂಡದ ಪರಿಸ್ಥಿತಿ ಕಳವಳದಿಂದಲೇ ಕೂಡಿದೆ. ಕಳೆದ ಒಂದು ತಿಂಗಳಿನಿಂದ ಉತ್ತರಾಖಂಡದ ಶೇ. 40ರಷ್ಟು ಅರಣ್ಯಗಳು ಉರಿಯುತ್ತಿವೆ. ಮನೆ, ಪ್ರಾಣ, ನೆಮ್ಮದಿ ಕಳೆದುಕೊಂಡವರ ಆಕ್ರಂದನದ ದನಿ ಇನ್ನೂ ನಿಂತೇ ಇಲ್ಲ. ಆದರೆ, ಏನೆಲ್ಲ ಸಂಕಟಗಳ ನಡುವೆಯೂ ಹಿಮಾಲಯ ಪರ್ವತಗಳ ಸಾಲನ್ನೇ ತಡೆಗೋಡೆಯನ್ನಾಗಿಸಿಕೊಂಡಿರುವ, 'ಅಪ್ಪಿಕೋ ಚಳವಳಿ'ಯ ತವರಾದ ಉತ್ತರಾಖಂಡದ ಹೂವಿನ ಕಣಿವೆ ಸಹೃದಯರನ್ನು ತನ್ನತ್ತ ಸೆಳೆಯುವಂತಿದೆ. ಜೂನ್‌ನಲ್ಲಂತೂ ಲಕ್ಷ ಲಕ್ಷ ಪ್ರವಾಸಿಗರು ಉತ್ತರಾಖಂಡದ ಹೂ ಕಣಿವೆಯಲ್ಲಿ ತಮ್ಮ ಮನಸ್ಸುಗಳನ್ನು ಹೂಗಳನ್ನಾಗಿಸಿಕೊಳ್ಳುತ್ತಾರೆ.

ಹುಲಿ, ಆನೆ, ಕೃಷ್ಣಮೃಗ, ಸಿಂಹ ಚಿರತೆಗಳಿಗೆಲ್ಲ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನಗಳು ಇರುವುದನ್ನು ನಾವು ಬಲ್ಲೆವು. ಜೀವವೈವಿಧ್ಯದ ಪ್ರಾಮುಖ್ಯ ತಿಳಿದಿರುವ ನಾವು, ಪ್ರಾಣಿಗಳೊಂದಿಗೆ ಹೂವುಗಳಿಗಾಗಿಯೂ ರಾಷ್ಟ್ರೀಯ ಉದ್ಯಾನವನ ರೂಪಿಸಿದ್ದೇವೆ. 2005ರಲ್ಲಿ ಯುನೆಸ್ಕೋದಿಂದ 'ವಿಶ್ವ ಪಾರಂಪರಿಕ ತಾಣ' ಎಂಬ ಮನ್ನಣೆ ಗಳಿಸಿರುವ ಉತ್ತರಾಖಂಡ ಹೂವಿನ ಕಣಿವೆಯಲ್ಲಿ ಸುಮಾರು 600 ಪ್ರಭೇದದ ಹೂವು ಬಿಡುವ ಸಸ್ಯಗಳಿವೆ. ಈಗ ಪರ್ವತಗಳ ಹಿಮಕರಗಿ ನೇಸರನ ಕಿರಣ ಸ್ಪರ್ಶ ಹೆಚ್ಚುತ್ತಿದೆಯಾದ್ದರಿಂದ ಹೂ ಬಿಡುವ ಸಸ್ಯಗಳಲ್ಲಿ ಹೊಸ ಚೈತನ್ಯ ಉಕ್ಕುತ್ತಿದೆ. ನೂರಾರು ಬಗೆಯ ಹೂವುಗಳು ಅರಳಿ ನಿಂತಿವೆ.

ಸುಮಾರು 87 ಸಾವಿರ ಚ.ಕಿ.ಮೀ. ವ್ಯಾಪ್ತಿಯ ಹೂವಿನ ಕಣಿವೆಯಲ್ಲಿ ಅಕ್ಟೋಬರ್‌ವರೆಗೂ ವಿವಿಧ ಬಗೆಯ ಹೂವುಗಳ ಅನಾವರಣ. ಮೇ ತಿಂಗಳಿನಿಂದಲೇ ಹೂವು ಅರಳಲು ಶುರುವಾಗಿದೆ. ಅಕ್ಟೋಬರ್‌ವರೆಗೂ ಹೂವಿನ ಕಣಿವೆಯನ್ನು ವೀಕ್ಷಿಸಬಹುದಾದರೂ ಇಡೀ ಕಣಿವೆಯು ಹೂಗಳಿಂದ ತುಂಬಿರುವುದು ಜುಲೈನಿಂದ ಸೆಪ್ಟೆಂಬರ್ ಅವಧಿಯಲ್ಲಿ.

ಈಗಾಗಲೇ ಹೂವಿನ ಕಣಿವೆಯಲ್ಲಿ ಪೊಟೆಂಟಿಲ್ಲ (ಸ್ಟ್ರಾಬೆರಿ ಜಾತಿ), ಕಾಡು ಗುಲಾಬಿ, ಪ್ರಿಮ್ ರೋಸ್ ಹೂಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಅರಳಿದ್ದು ಕಣಿವೆಯಲ್ಲಿ ಸುಗಂಧದ ಅಲೆ ಮೂಡಿಸಿವೆ. ಬಗೆಬಗೆಯ ಆರ್ಕಿಡ್‌ಗಳು, ಗಸಗಸೆ ಹೂಗಳು, ಡೈಸಿ, ಅನೆಮೊನೆ ಹೂಗಳು, ಹಳದಿ ಮಾರಿಗೋಲ್ಡ್‌ಗಳು, ನೀಲಿ ಡೇರೆ ಹೂವುಗಳು ಕಣಿವೆಯ ಉದ್ದಗಲಕ್ಕೂ ತೊನೆದಾಡುತ್ತಿವೆ. ಪ್ರತಿ 15 ದಿನಗಳಿಗೊಮ್ಮೆ ಕಣಿವೆ ಬಣ್ಣ ಬದಲಾಗುತ್ತದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಇಡೀ ಕಣಿವೆ ದಟ್ಟ ವರ್ಣದ ಹೂಗಳಿಂದ ತುಂಬಿದ 'ಪುಷ್ಪಸಾಗರ'ದಂತೆ ಕಾಣುತ್ತದೆ.

'ಹೂವಿನ ಸ್ವರ್ಗ' ಎಂದೇ ಪ್ರಸಿದ್ಧವಾಗಿರುವ ಕಣಿವೆಯನ್ನು ವೀಕ್ಷಿಸಲು ಪ್ರವಾಸಿಗರು ಸಮುದ್ರ ಮಟ್ಟದಿಂದ 11000 ಅಡಿ ಎತ್ತರವಿರುವ ಗೋವಿಂದ ಘಾಟ್ ಅಥವಾ ಪುಲನ್ ಹಳ್ಳಿಯ ಅಂಚಿನಿಂದ ನಡಿಗೆ ಪ್ರಾರಂಭಿಸಬೇಕು. ಮೂರು ದಿನದ ಚಾರಣ ಕಾರ್ಯಕ್ರಮದಲ್ಲಿ 11 ಕಿ.ಮೀ. ನಡೆಯಬೇಕಾಗುತ್ತದೆ.

